ವಿಳಾಸ : UNIREG
ದೂರವಾಣಿ ಸಂಖ್ಯೆ :2419440/2419361
ಫ್ಯಾಕ್ಸ್ ಸಂಖ್ಯೆ : 0821- 2419363/2419301

ಇಮೇಲ್ :registrar@uni-mysore.ac.in
ವೆಬ್ ಸೈಟ್: www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406,
ಮೈಸೂರು-570 005.

ವಿಷಯ: 2020-21ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. ವಿಶ್ವವಿದ್ಯಾನಿಲಯದ ಸಮ ಸಂಖ್ಯೆ ಆದೇಶ ದಿನಾಂಕ 31.07.2019(2).
2. ಅಧ್ಯಕ್ಷರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರ ಪತ್ರ ಸಂಖ್ಯೆ MGC/406/2020-21 ದಿನಾಂಕ 10-02-2021.
3. ಮಾನ್ಯ ಕುಲಪತಿಯವರ ಆದೇಶ ದಿನಾಂಕ 02-03-2021.

*****

**ಪರಿಷ್ಕೃತ ಆದೇಶ ಸಂಖ್ಯೆ: ಇಟಿ8/502/2018-19 ದಿನಾಂಕ 03ನೇ ಮಾರ್ಚ್ 2021**

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ಉಲ್ಲೇಖ (1)ರ ಆದೇಶದ ಮುಂದುವರೆಕೆಯಾಗಿ ಕೆಳಕಂಡ ಅತಿಥಿ ಉಪನ್ಯಾಸಕರಿಗೆ ಈಗಾಗಲೇ ಹಂಚಿಕೆ ಮಾಡಲಾಗಿದ್ದ ಬೋಧನಾ ಕಾರ್ಯಭಾರವನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.

| ಅತಿಥಿ ಉಪನ್ಯಾಸಕರ ಹೆಸರು | ವಿಷಯ | ಉಲ್ಲೇಖ (1)ರ ಆದೇಶದಲ್ಲಿ ವಹಿಸಿದ್ದ ಬೋಧನಾ (ಥಿಯರಿ /ಪ್ರಾಕ್ಟಿಕಲ್) ಕಾರ್ಯಭಾರ(ಗಂಟೆಗಳಲ್ಲಿ)* | ಉಲ್ಲೇಖ (1)ರ ಆದೇಶದಲ್ಲಿ ನಿಗದಿಪಡಿಸಿದ್ದ ಮಾಹೆಯಾನ ಸಂಭಾವನೆ | ಪ್ರಸ್ತುತ ನಿಗದಿಪಡಿಸಿರುವ ಪರಿಷ್ಕೃತ ಬೋಧನಾ (ಥಿಯರಿ / ಪ್ರಾಕ್ಟಿಕಲ್) ಕಾರ್ಯಭಾರ(ಗಂಟೆಗಳಲ್ಲಿ) * | ಪರಿಷ್ಕೃತ ಸಂಭಾವನೆ ರೂ.ಗಳಲ್ಲಿ |
|---|---|---|---|---|---|
| Syida Aameera Yakuth, #446, Shalivahana road, Nazarbad Mohalla, Mysuru. | ರಸಾಯನಶಾಸ್ತ್ರ | 08 | 15,000/- | 12 | 28,000/- |

* ಬೋಧನಾ ವಿಷಯ, ಥಿಯರಿ/ಪ್ರಾಕ್ಟಿಕಲ್ ಕಾರ್ಯದ ಬಗ್ಗೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು ಹಂಚಿಕೆ ಮಾಡುವರು. **ಎರಡು ಪ್ರಾಯೋಗಿಕ ಬೋಧನಾ ಕಾರ್ಯವು ಒಂದು ಥಿಯರಿ ಬೋಧನಾ ಕಾರ್ಯಕ್ಕೆ ಸಮಾನವಾಗಿರುತ್ತದೆ.**

ಆಹ್ವಾನಿತ ಅತಿಥಿ ಉಪನ್ಯಾಸಕರು ಈ ಆದೇಶ ತಲುಪಿದ 7 ದಿನಗಳೊಳಗೆ ಸಂಬಂಧಪಟ್ಟ ಅಧ್ಯಯನ ವಿಭಾಗದ ಅಧ್ಯಕ್ಷರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಆದೇಶವು ರದ್ದಾಗುತ್ತದೆ.

09/3/21

ಈ ವೆಚ್ಚವನ್ನು ಆಯವ್ಯಯ ಅಂದಾಜುಗಳ "ವೇತನ ಮತ್ತು ಭತ್ಯೆಗಳು" ಖಾತೆಯ "ತಾತ್ಕಾಲಿಕ ಅಧ್ಯಾಪಕರ ವೇತನ" (ಕೋಡ್ 228) ಶೀರ್ಷಿಕೆಯಿಂದ ಭರಿಸಬಹುದಾಗಿದೆ.

**ಷರತ್ತುಗಳು:**

ಅ. ಪ್ರತಿ ವಾರದಲ್ಲಿ 12 ಗಂಟೆಗಳ ಬೋಧನಾ ಕಾರ್ಯನಿರ್ವಹಿಸಲು ಆಹ್ವಾನಿತವಾಗಿರುವ ಅತಿಥಿ ಉಪನ್ಯಾಸಕರುಗಳು ಪ್ರತಿದಿನ ಅಧ್ಯಯನ ವಿಭಾಗದ ಕೆಲಸದ ಪೂರ್ಣಾವಧಿಯಲ್ಲಿ ಕಡ್ಡಾಯವಾಗಿ ಉಪಸ್ಥಿತರಿದ್ದು, ವಿದ್ಯಾರ್ಥಿಗಳ ಮಾರ್ಗದರ್ಶನಕ್ಕೆ ಲಭ್ಯವಿರಬೇಕು ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಕಾಶಿಇ/44/ಅಉನೇ/2012-13ನೇ ಪಾವಿ-1, ದಿನಾಂಕ 02-07-2013ರ ಪ್ರಕಾರ ಕಾರ್ಯ ನಿರ್ವಹಿಸಬೇಕಾಗಿರುತ್ತದೆ.

ಆ. ಅತಿಥಿ ಉಪನ್ಯಾಸಕರು ಪ್ರತಿ ಮಾಹೆಯಲ್ಲಿ ಒಂದು ದಿವಸ ಸಾಂದರ್ಭಿಕ ರಜೆಯನ್ನು ಪಡೆಯಲು ಅರ್ಹರಿರುತ್ತಾರೆ ಮತ್ತು ಈ ರಜೆ ಅವಧಿಯ ಬೋಧನಾ ಕಾರ್ಯಭಾರವನ್ನು ಮುಂದಿನ ಮಾಹೆಯೊಳಗೆ ಸರಿದೂಗಿಸುವುದು.

ಇ. ಹಂಚಿಕೆಯಾಗಿರುವ ಬೋಧನಾ ತರಗತಿಗಳನ್ನು ತೆಗೆದುಕೊಳ್ಳಲು ವಿಫಲರಾದಲ್ಲಿ, ಗೈರುಹಾಜರಾದ ದಿನದ ಸಂಭಾವನೆಯನ್ನು ಕಡಿತಗೊಳಿಸಲಾಗುವುದು.

ಈ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2020-21ನೇ ಶೈಕ್ಷಣಿಕ ವರ್ಷದಲ್ಲಿ 12 ಗಂಟೆಗಳ ಕಾರ್ಯಭಾರ ನಿರ್ವಹಿಸುವ ಅತಿಥಿ ಉಪನ್ಯಾಸಕರುಗಳು ಬೇರೆ ಸರ್ಕಾರಿ ಕಾಲೇಜು ಅಥವಾ ಖಾಸಗಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಬಾರದು.

ಪು.ತಿ.ನೋ

ಆಹ್ವಾನಿತ ಅತಿಥಿ ಉಪನ್ಯಾಸಕರು ಕೆಲಸಕ್ಕೆ ವರದಿ ಮಾಡಿಕೊಳ್ಳುವಾಗ ಈ ಕೆಳಕಂಡಂತೆ ಮುಚ್ಚಳಿಕೆಯನ್ನು ನೀಡತಕ್ಕದ್ದು.

ಮುಚ್ಚಳಿಕೆ

1. ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ವಿಶ್ವವಿದ್ಯಾನಿಲಯವು 2020-21ನೇ ಶೈಕ್ಷಣಿಕ ವರ್ಷಕ್ಕೆ ಅಥವಾ ಮುಂದಿನ ಆದೇಶದವರೆಗೆ, ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಹೆಚ್ಚುವರಿ ಬೋಧನಾ ಕಾರ್ಯವನ್ನು ನಿರ್ವಹಿಸಲು ನನ್ನನ್ನು ಆಹ್ವಾನಿಸಿರುವುದು ತಾತ್ಕಾಲಿಕವಾಗಿರುತ್ತದೆ ಎಂದು ತಿಳಿದಿರುತ್ತೇನೆ. ಜೊತೆಗೆ ಕಾರಣಾಂತರಗಳಿಂದ ಹೆಚ್ಚುವರಿ ಭೋಧನಾ ಕಾರ್ಯದಲ್ಲಿ ಕೊರತೆಯುಂಟಾದಲ್ಲಿ ವಿಶ್ವವಿದ್ಯಾನಿಲಯವು ಯಾವುದೇ ಮುನ್ಸೂಚನೆ ಇಲ್ಲದಂತೆ ಹಾಗೂ ಯಾವುದೇ ಕಾರಣ ನೀಡದೆ ನನಗೆ ನೀಡಿರುವ ಅತಿಥಿ ಉಪನ್ಯಾಸಕರ ಆಹ್ವಾನವನ್ನು ಹಿಂಪಡೆಯಬಹುದಾಗಿದೆ.

2. ನಾನು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಕಾಶಿಇ/44/ಆಉನೇ/2012-13ನೇ ಪಾವಿ-1 ದಿನಾಂಕ 02.7.2013ರಲ್ಲಿ ಸೂಚಿಸಿರುವಂತೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕನಾಗಿ ಕೆಲಸ ನಿರ್ವಹಿಸುತ್ತಿರುವಾಗ ಯಾವುದೇ ಸರ್ಕಾರಿ/ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕನಾಗಿ ಕರ್ತವ್ಯ ನಿರ್ವಹಿಸುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಹಾಗೂ ಹಾಗೇನಾದರೂ ಕೆಲಸ ನಿರ್ವಹಿಸುವುದು ಕಂಡು ಬಂದಲ್ಲಿ, ಈ ನೇಮಕಾತಿಯನ್ನು ಯಾವುದೇ ಸೂಚನೆ ನೀಡದೇ ರದ್ದುಪಡಿಸಲಾಗುವುದೆಂದು ತಿಳಿದಿರುತ್ತೇನೆ.

ಮೇಲಿನ ಎಲ್ಲಾ ಷರತ್ತುಗಳಿಗೆ ಬದ್ಧರಾಗಿ ತಾವು ನೀಡಿರುವ ಅತಿಥಿ ಉಪನ್ಯಾಸಕರ ಆಹ್ವಾನವನ್ನು ಒಪ್ಪಿಕೊಂಡಿರುತ್ತೇನೆ.

ಆದೇಶದ ಮೇರೆಗೆ,

ಕುಲಸಚಿವ

ಇವರಿಗೆ:

1. ಸಂಬಂಧಪಟ್ಟ ಅತಿಥಿ ಉಪನ್ಯಾಸಕರಿಗೆ ಅಧ್ಯಕ್ಷರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು-ಇವರ ಮುಖಾಂತರ.
2. ಅಧ್ಯಕ್ಷರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು-ಅತಿಥಿ ಉಪನ್ಯಾಸಕರಿಂದ ಮೇಲೆ ತಿಳಿಸಿರುವ ಮುಚ್ಚಳಿಕೆಯನ್ನು ಕಡ್ಡಾಯವಾಗಿ ಬರೆಸಿಕೊಳ್ಳುವುದು.
3. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಹಣಕಾಸು ಅಧಿಕಾರಿಯವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಆಡಳಿತಾಧಿಕಾರಿಯವರು, ಮಾನಸಗಂಗೋತ್ರಿ, ಮೈಸೂರು.
6. ಉಪಕುಲಸಚಿವರು(ಸಾಮಾನ್ಯ)/ಸಹಾಯಕ ಕುಲಸಚಿವ/ಅಧೀಕ್ಷಕರು (ಸಿಬ್ಬಂದಿ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.